Employees still under Suspension pending Enquiry	...	128
Employees removed. (Badhlis)	...	4
Number of employees terminated (Badhlies)	...	20

(g) Necessary steps like cenciliation are being taken. Govt. is very anxious to resolve genuine grievances of workers.

Grant of assistance under Self Employment to educated unemployed youths in Mulbagal Taluk

Qn. No. 46 (54) SRI R. VENKATARAMAIAH (Mulbagal) —Will the Minister for Large & Medium Scale Industries be pleased to state that :

(a) The number of persons granted relief under the Self Employment Scheme in Mulbagal Taluk.

(b) Whether it has come to the notice of Government that many of the applicants have not been granted and assistance by the Nationalised Banks ?

(c) If so, whether Government will take steps to persuade such banks to sanction loan under the Self Employment Scheme ?

SRI J. H. PATEL (Minister for Large and Medium Scale Industries).—

(a) 34 persons during 1984-85.

(b) Yes.

(c) Yes.

ಶ್ರೀ ಕೆ. ಹೆಜ್. ಪಾಟೀಲ್ (ಗದಗ).— ಅಧ್ಯಕ್ಷರೇ, ನಾನು ಪ್ರಶ್ನೆ ೪೦೨ನ್ನು ಕಳುಹಿಸಿದ್ದೇನೆ. ತಾವು ಅನ್ ಸ್ಪಾರ್ಡ್ ಮಾಡಿಲ್ಲ. ಪಟ್ಟಿಯಲ್ಲಿ ಸ್ಪಾರ್ಡ್ ಪ್ರಶ್ನೆಯೆಂದು ಬರೆಯುವುದಕ್ಕೆ ಅನ್‌ಸ್ಪಾರ್ಡ್ ಎಂದು ಬಿದ್ದಿದೆ. ಆದುದರಿಂದ ಇದು ಪ್ರಾಯಶಃ ಸೆಕ್ರೆಟರಿಯವರಿಂದ ತಪ್ಪಾಗಿರಬಹುದು. ತಾವು ಅನುಮತಿ ಕೊಟ್ಟರೆ ಕೇಳುತ್ತೇನೆ.

ಅಧ್ಯಕ್ಷರು.—ಅದು ಅನ್‌ಸ್ಪಾರ್ಡ್ ಆಗಿ ಅಡ್ಮಿಟ್ ಆಗಿದೆ.

ಸಭೆಯು ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್.—(ಶ್ರೀ ಎಸ್. ಆರ್. ಬೊಮ್ಮಾಯಿ ಅವರ ಪರವಾಗಿ) ೧೯೮೪ನೇ ಇಸವಿಯ ಕರ್ನಾಟಕ ಕಂದಾಯಶಾಸನದ ೧೯೪ನೇ ಕಲಮಿನ ಮೇರೆಗೆ ೧೯೪೫-೪೫ನೇ ಸಾಲಿನ ಶಿಕಾರಿಪುರ ತಾಲ್ಲೂಕಿನ ಹಿರೆ ಹಳ್ಳಿಗಳ ಭೂ ಕಂದಾಯವನ್ನು ತಾತ್ಕಾಲಿಕವಾಗಿ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೩-೧೨-೪೫ ರಂದು ಹೊರಡಿಸಲಾದ ಎಳ್.ಡಿಸಿಬಿ, ಸಿಆರ್ ೩೪-೪೪-೪೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (೨)(ಎ)ನೇ ಕಲಮಿನ ಮೇರೆಗೆ ೧೯೮೧-೮೨ನೇ ಸಾಲಿನ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಹದಿನಾಲ್ಕನೆಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.(ಸಮಾಜ ಕಲ್ಯಾಣ ಮಂತ್ರಿ)—೧೯೫೬ನೇ ಇಸವಿಯ ಕಂಪನಿಗಳ ಕಾಯಿದೆಯ ೬೧೯(೨)(ಎ)ಕಲಮಿನ ಮೇರೆಗೆ ೧೯೮೪-೮೫ನೇ ಸಾಲಿನ ಕರ್ನಾಟಕ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ ಏಳನೆಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಕಾರ್ಯದರ್ಶಿ.—ಕರ್ನಾಟಕ ವಿಧಾನ ಪರಿಷತ್ತು ಹಿಂದಿರುಗಿಸಿದ ೧೯೮೫ನೆ, ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲಿನ ತೆರಿಗೆ)(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ,

ಅಧ್ಯಕ್ಷರು.—ಮೇಲ್ಕಂಡ ಎಲ್ಲಾ ಕಾಗದ ಪತ್ರಗಳನ್ನು ಸಭೆಯಲ್ಲಿ ಮುಂಡಿಸಲಾಗಿದೆ.

ಗಮನ ಸೆಳೆಯುವ ಸೂಚನೆಗಳು

ಮುದೋಳ್ ತಾಲ್ಲೂಕು ಬಸವಾಪಟ್ಟಣದ ಹತ್ತಿರ ಕಟ್ಟಿಸಿರುವ ನೀರಾವರಿ ಟ್ಯಾಂಕ್‌ನ ಬಗ್ಗೆ.

ಶ್ರೀ ಬಿ. ಜೆ. ಜಮಖಂಡಿ (ಮುದೋಳ್).—ಮಾನ್ಯ ಅಧ್ಯಕ್ಷರೇ, ಮುದೋಳ್ ತಾಲ್ಲೂಕಿನ ಬಸವಾಪಟ್ಟಣದ ಹತ್ತಿರ೧೯೫೫ನೇ ಇಸವಿಯಲ್ಲಿ ೬ ಲಕ್ಷ ರೂಪಾಯಿ ವೆಚ್ಚ ಮಾಡಿ, ಸರ್ಕಾರ ನೀರಾವರಿ ಸೌಲಭ್ಯವಾಗಿ ಒಂದು ಟ್ಯಾಂಕನ್ನು ಕಟ್ಟಿದೆ. ಇದರಿಂದ ಎಷ್ಟರ ಮಟ್ಟಿಗೆ ನೀರಾವರಿ ಸೌಲಭ್ಯವಾಗಿದೆ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್ ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು)—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕ ವಿಚಾರದಲ್ಲಿ ನನ್ನ ಹೇಳಿಕೆ ಈ ಕೆಳಕಂಡಂತೆ ಇದೆ.

ಬಸವಪಟ್ಟಣದ ಹತ್ತಿರ ದಾದಾಪೀರ್ ಎಂಬಲ್ಲಿ ಒಂದು ಸಣ್ಣ ನೀರಾವರಿ ಕೆರೆಯನ್ನು ಕಟ್ಟಲು ೪.೩೫,೩೮೦ ರೂಗಳ ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಒಪ್ಪಿಗೆಯನ್ನು ದಿನಾಂಕ ೩೦-೫-೧೯೬೨ರಲ್ಲಿ ಕೊಡಲಾಗಿತ್ತು. ಈ ಅಂದಾಜಿಗೆ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಇಂಜಿನಿಯರ್ (ಜನರಲ್) ಅವರು ದಿನಾಂಕ ೨೭-೬-೧೯೬೨ರಲ್ಲಿ ಕೊಟ್ಟಿದ್ದರು. ಮಂಜೂರಾದ ಅಂದಾಜಿನ ಪ್ರಕಾರ, ಕೆರೆಯ ಆಚ್ಚು ಕಟ್ಟು ೩೬೯.೩೬ ಹೆಕ್ಟೇರುಗಳು, ಕೆರೆಯ ಜಲಾಶಯದ ಪ್ರದೇಶದ ವಿಸ್ತೀರ್ಣ ೨೪೪.೩೫ ಚ. ಕಿ. ಮೀ ಕೆರೆಯ ಕೆಲಸ ೫೦೪ ಲಕ್ಷ ರೂ.ಗಳ ವೆಚ್ಚದಲ್ಲಿ ೧೯೬೪ರಲ್ಲಿ ಪೂರ್ಣಗೊಂಡಿತು. ಆದರೆ, ಕೆರೆಯು ಮಳೆಯ ಅಭಾವ ಪ್ರದೇಶದಲ್ಲಿ (ರೈನ್ ಷಾಡೋ ಏರಿಯ) ಬರುವುದರಿಂದ ಪ್ರತಿ ವರ್ಷ ತುಂಬುತ್ತಿಲ್ಲ. ಆದುದರಿಂದ ಕೆರೆಯ ಪಾಪ್ತಿಗೆ ಒಳಪಟ್ಟಿರುವ ಆಚ್ಚುಕಟ್ಟನ್ನು ಪೂರ್ತಿಯಾಗಿ ಅಭಿವೃದ್ಧಿಗೊಳಿಸಲು ಸಾಧ್ಯವಾಗುತ್ತಿಲ್ಲ.